# ಸಾಧಕನ ಭಾವಗಳು



❁ ಆತನಿಗೆ ಹಲವಾರು ವಿಧದಿಂದ ಸೇವೆ ಸಲ್ಲಿಸಬಹುದು. ಪ್ರೇಮಿಕ ಭಕ್ತ ಆತನೊಡನೆ ವಿವಿಧ ರೂಪದಲ್ಲಿ ಆನಂದಪಡುತ್ತಾನೆ. ಕೆಲವು ವೇಳೆ ಯೋಚಿಸುತ್ತಾನೆ, 'ನೀನು ತಾವರೆ, ನಾನು ದುಂಬಿ' ಎಂದು. ಇನ್ನು ಕೆಲವು ವೇಳೆ ಭಾವಿಸುತ್ತಾನೆ, 'ನೀನು ಸಚ್ಚಿದಾನಂದ ಸಾಗರ, ನಾನು ಅದರಲ್ಲಿ ಮೀನು' ಎಂದು. ಮತ್ತೆ ಕೆಲವು ವೇಳೆ ಯೋಚಿಸುತ್ತಾನೆ, 'ನಾನು ನಿನ್ನ ನರ್ತಕಿ' ಎಂದು. ಆತನ ಮುಂದೆ ಹಾಡುತ್ತಾನೆ, ನರ್ತಿಸುತ್ತಾನೆ. ಕೆಲವು ವೇಳೆ ಸಖೀಭಾವ-ದಾಸೀಭಾವ. ಕೆಲವು ವೇಳೆ ವಾತ್ಸಲ್ಯಭಾವ-ಯಶೋದೆಯಂತೆ. ಕೆಲವು ವೇಳೆ ಸತೀಭಾವ-ಮಧುರಭಾವ-ಗೋಪಿಯರಂತೆ.

❁ ಬಲರಾಮ ಕೆಲವು ವೇಳೆ ಸಖನ ಭಾವದಲ್ಲಿ ಇರುತ್ತಿದ್ದ. ಕೆಲವು ವೇಳೆ ಯೋಚಿಸುತ್ತಿದ್ದ, 'ನಾನು ಕೃಷ್ಣನ ಛತ್ರಿ ಮತ್ತು ಪೀಠ ಆಗಿದ್ದೇನೆ' ಎಂದು. ವಿವಿಧ ರೀತಿಯಿಂದ ಆತನ ಸೇವೆ ಮಾಡುತ್ತಿದ್ದ.

❁ ನೀವು ಈ ಮಾತುಕತೆಗಳನ್ನೆಲ್ಲ ಕೇಳುತ್ತಿದ್ದೀರಿ. ಅರಗಿಸಿಕೊಳ್ಳಲು ಪ್ರಯತ್ನಿಸಿ. ಪ್ರಾಪಂಚಿಕರು ಸಾಧುಗಳ ಹತ್ತಿರಕ್ಕೆ ಬಂದಾಗ ತಮ್ಮ ಪ್ರಾಪಂಚಿಕ ಭಾವನೆ, ವಿಷಯಚಿಂತನೆ ಇವನ್ನೆಲ್ಲ ತಮ್ಮ ಹೃದಯದಲ್ಲಿ ಬಚ್ಚಿಟ್ಟು ಕುಳಿತಿರುತ್ತಾರೆ. ಅಲ್ಲಿಂದ ಹೊರಟು ಹೋದ ನಂತರ ಅವನ್ನೆಲ್ಲ ಹೊರಕ್ಕೆ ತರುತ್ತಾರೆ. ಪಾರಿವಾಳ ಬಟಾಣಿಯನ್ನು ತಿನ್ನುತ್ತದೆ. ನೋಡುವುದಕ್ಕೆ ಅದು ಅವನ್ನೆಲ್ಲ ಅರಗಿಸಿಕೊಂಡುಬಿಟ್ಟಂತೆ ಕಾಣುತ್ತದೆ. ಆದರೆ ಅದು ತನ್ನ ಗಂಟಲಿನೊಳಗೇ ಅದನ್ನೆಲ್ಲ ಇಟ್ಟುಕೊಂಡಿರುತ್ತದೆ. ಅಲ್ಲಿ ಬಟಾಣಿ ಗಿಜಿಗಿಜಿ ಅನ್ನುತ್ತಿರುತ್ತದೆ.

❁ ಸಂಧ್ಯಾ ಸಮಯದಲ್ಲಿ ಎಲ್ಲಾ ಕೆಲಸಗಳನ್ನು ಬಿಟ್ಟು ಆತನನ್ನು ಕರೆಯಬೇಕು. ಕತ್ತಲೆ ಆತನ ನೆನಪು ತರುತ್ತದೆ. ಆಗ, 'ಈಗ ತಾನೆ ಎಲ್ಲಾ ಕಾಣಿಸಿಕೊಳ್ಳುತ್ತಿತ್ತು; ಈ ರೀತಿಯಾಗಿ ಮಾಡಿಬಿಟ್ಟವನು ಯಾರು!' ಎಂಬ ಭಾವನೆ ಬರುತ್ತದೆ. ನೋಡಿ, ಮುಸಲ್ಮಾನರು ಎಲ್ಲಾ ಕೆಲಸಗಳನ್ನು ಬಿಟ್ಟು ಸಾಯಂಕಾಲ ನಮಾಜು ಮಾಡುತ್ತಾರೆ.

❁ ಭಕ್ತ : ಜಪ ಮಾಡುವುದು ಒಳ್ಳೆಯದೇನು?

ಶ್ರೀರಾಮಕೃಷ್ಣರು: ಹೌದು, ಜಪದಿಂದ ಆತನನ್ನು ಪಡೆಯಬಹುದು. ನಿರ್ಜನ ಪ್ರದೇಶದಲ್ಲಿ ಏಕಾಂತವಾಗಿ ಆತನ ನಾಮವನ್ನು ಜಪಮಾಡುತ್ತ ಜಪಮಾಡುತ್ತ ಇದ್ದರೆ ಆತನ ಕೃಪೆ ದೊರೆಯುತ್ತದೆ. ಬಳಿಕ ಆತನ ದರ್ಶನ. ಉದಾಹರಣೆಗಾಗಿ, ಒಂದು ದೊಡ್ಡ ಮರದ ದಿಮ್ಮಿಯನ್ನು ನೀರಿನಲ್ಲಿ ಮುಳುಗಿಸಿ ಅದನ್ನು ಸರಪಣಿಯಿಂದ ದಡಕ್ಕೆ ಕಟ್ಟಿರುವುದನ್ನು ತೆಗೆದುಕೊಳ್ಳಿ. ಆ ಸರಪಣಿಯ ಕೊಂಡಿಯಾದ ಮೇಲೆ ಕೊಂಡಿಯನ್ನು ಹಿಡಿದು ಮುಂದುವರಿದರೆ ಕೊನೆಗೆ ಹೋಗಿ ಆ ಮರದ ದಿಮ್ಮಿಯನ್ನು ಮುಟ್ಟಲು ಆಗುವಂತೆ ಇದು.

❁ ಪೂಜೆಗಿಂತ ಮೇಲಾದುದು ಜಪ, ಜಪಕ್ಕಿಂತ ಮೇಲಾದುದು ಧ್ಯಾನ, ಧ್ಯಾನಕ್ಕಿಂತ ಮೇಲಾದುದು ಭಾವ, ಭಾವಕ್ಕಿಂತ ಮೇಲಾದುದು ಮಹಾಭಾವ, ಪ್ರೇಮ. ಚೈತನ್ಯದೇವನಿಗೆ ಪ್ರೇಮ ಉಂಟಾಗಿತ್ತು. ಪ್ರೇಮ ಉಂಟಾದರೆ ಭಗವಂತನನ್ನು ಕಟ್ಟಿ ಇಡಲು ಒಂದು ಹಗ್ಗ ದೊರಕಿದಂತೆಯೆ.

❁ ಏನೂ ಬೇಕಾಗಿಲ್ಲ, ಆದರೂ ಪ್ರೀತಿಸುವುದು — ಇದಕ್ಕೆ ಅಹೇತುಕ ಭಕ್ತಿ, ಶುದ್ಧ ಭಕ್ತಿ ಎಂದು ಹೆಸರು. ಪ್ರಹ್ಲಾದನಿಗೆ ಇದು ಇತ್ತು. ರಾಜ್ಯ ಬೇಕಾಗಿರಲಿಲ್ಲ, ಐಶ್ವರ್ಯ ಬೇಕಾಗಿರಲಿಲ್ಲ, ಕೇವಲ 'ಹರಿ' ಮಾತ್ರ ಆತನಿಗೆ ಬೇಕಾಗಿತ್ತು.

❁ ಯಾವುದನ್ನೇ ಆದರೂ ಆತನಿಗೆ ಒಂದು ಪಾಲಿನಷ್ಟು ಅರ್ಪಿಸಿದರೆ ಅದರ ಸಹಸ್ರದಷ್ಟು ಪಾಲು ಹಿಂದಿರುಗಿ ಬರುತ್ತದೆ. ಅದಕ್ಕಾಗಿಯೆ ದಾನ ಧರ್ಮಾದಿಗಳನ್ನು ಮಾಡಿದ ನಂತರ ಒಂದು ಬೊಗಸೆ ನೀರನ್ನು ತೆಗೆದುಕೊಂಡು, 'ಶ್ರೀಕೃಷ್ಣಾರ್ಪಣಮಸ್ತು— ಶ್ರೀಕೃಷ್ಣನಿಗೆ ಫಲವನ್ನು ಅರ್ಪಿಸಿದ್ದೇನೆ' ಎಂದು ಹೇಳುವುದು. ಯುಧಿಷ್ಠಿರ ತನ್ನ ಸಕಲ ಪಾಪಗಳನ್ನು ಶ್ರೀಕೃಷ್ಣನಿಗೆ ಅರ್ಪಿಸಲು ಸಿದ್ಧನಾಗುತ್ತಿದ್ದಾಗ ಒಬ್ಬ (ಭೀಮ) 'ಅಂಥ ಕಾರ್ಯವನ್ನು ಎಂದಿಗೂ ಮಾಡಬೇಡ — ಶ್ರೀಕೃಷ್ಣನಿಗೆ ನೀನು ಏನು ಅರ್ಪಿಸುವಿಯೊ, ಅದು ಒಂದು ಸಹಸ್ರಮಡಿಯಾಗಿ ನಿನಗೆ ಹಿಂದಿರುಗಿ ಬರುತ್ತದೆ' ಎಂದು ಎಚ್ಚರಿಕೆ ಕೊಟ್ಟ.

❁ ನಾನು ಯಾರದು ಯಾವ ಭಾವವೊ ಅದನ್ನು ಸಂರಕ್ಷಿಸಲು ಪ್ರಯತ್ನಿಸುತ್ತಿದ್ದೇನೆ. ವೈಷ್ಣವರಿಗೆ ವೈಷ್ಣವರ ಭಾವದಲ್ಲಿಯೆ ಮುಂದುವರಿಯುವಂತೆ ಹೇಳುತ್ತೇನೆ; ಶಾಕ್ತನಿಗೆ ಶಾಕ್ತರ ಭಾವ. ಆದರೆ ಹೇಳುತ್ತೇನೆ, 'ಹೀಗೆ ಎಂದೂ ಹೇಳಬೇಡಿ ನಮ್ಮ ಮಾರ್ಗವೇ ಸತ್ಯ, ಉಳಿದುದೆಲ್ಲ ಮಿಥ್ಯ, ತಪ್ಪು!' ಎಂದು. ಹಿಂದೂ, ಮುಸಲ್ಮಾನ, ಕ್ರೈಸ್ತ — ವಿವಿಧ ಮಾರ್ಗದಿಂದ ಒಂದೇ ಸ್ಥಳಕ್ಕೆ ಹೋಗಿ ಸೇರುತ್ತಾರೆ. ತಮ್ಮ ತಮ್ಮ ಭಾವವನ್ನು ಸಂರಕ್ಷಿಸಿಕೊಂಡು ಹೃತ್ಪೂರ್ವಕವಾಗಿ ಭಗವಂತನನ್ನು ಕರೆದರೆ ಆತನನ್ನು ಪಡೆಯಬಹುದು.

❁ ದೇಶಕಾಲ ಪಾತ್ರಕ್ಕೆ ತಕ್ಕಂತೆ ಪ್ರತಿಯೊಬ್ಬನಿಗೂ ಬೇರೆ ಬೇರೆ ಮಾರ್ಗ. ಆದರೆ ಯಾವ ಮಾರ್ಗವನ್ನಾದರೂ ಹಿಡಿದು ಹೋಗಲಿ ಶುದ್ಧಮನಸ್ಕನಾಗಿ ಹೃತ್ಪೂರ್ವಕ ವ್ಯಾಕುಲತೆಯಿಂದ ಆತನನ್ನು ಕರೆದರೆ ಆಗ ಆತನನ್ನು ಪಡೆಯಬಹುದು.

ಶ್ರೀರಾಮಕೃಷ್ಣ ವಚನವೇದದಿಂದ